**OS. No.14/2019**
**P.W-6**

**( ದಿನಾಂಕ.17-08-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀ ಸವಾಲುಃ** A.G.P ರವರಿಂದ

ದಾವಾ ಸ್ವತ್ತಿನ ಸರ್ವೇ ನಂಬರ 2 1967-68 ಪಹಣಿಗಳಲ್ಲಿ ಸರಕಾರಿ ಜಮೀನು ಮತ್ತು ಸರಕಾರಿ ದೇವಲು ಎಂದು ಬರೆದಿದೆ ಎಂದರೆ ಸರಿಯಲ್ಲ. ನನಗೆ ಓದು ಮತ್ತು ಬರಹ ಬರುವುದಿಲ್ಲ. ದಾವಾ ಸ್ವತ್ತಿನ ಪಹಣಿಯಲ್ಲಿ ಸರಕಾರ ದೇವಲು ಮತ್ತು ಸರಕಾರಿ ಜಮೀನು ಎಂದು ಬರೆದಿದೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಕೈಬರಹದ ಪಹಣಿಗಳನ್ನು ಮತ್ತು ದಸ್ತಾವೇಜುಗಳನ್ನು ನೋಡಿಲ್ಲ. ಅವುಗಳಲ್ಲಿ ಏನು ಬರೆದಿದೆ ನನಗೆ ಗೊತ್ತಿಲ್ಲ.

ಸರ್ವೇ ನಂಬರ 2 ರಲ್ಲಿ ಸರಕಾರಿ ಶಾಲೆ ಇದೆ ಎಂದರೆ ಸರಿ. ಪಂಚಾಯತಿ ಕಚೇರಿ ಅಲ್ಲದೆ ಇಸ್ಮಾಯಲ್ ಖಾಧರಿ ದರ್ಗಾ ಇದೆ ಎಂದರೆ ಸರಿ. ಅಲ್ಲದೆ ಒಂದು ಸಿಮೆಂಟ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆ 50 ಅಡಿ ಉದ್ದ ಮತ್ತು ಅಗಲ 25 ಅಡಿ ಇರುತ್ತದೆ. ಎರಡು ಗಾಡಿಗಳು ಒಮ್ಮೆಲೆ ಹೋಗುತ್ತವೆ. ಸದರಿ ರಸ್ತೆಯನ್ನು ಪಂಚಾಯತಿವರು ನಿರ್ಮಿಸಿರುತ್ತಾರೆ. ನಮ್ಮ ಕುರುಬ ಸಮುದಾಯ ಸರಕಾರದಿಂದ ದಾವಾ ಸ್ವತ್ತನ್ನು ಖರೀದಿಸಿಲ್ಲ ಎಂದರೆ ಸರಿ. ದಾವಾ ಸ್ವತ್ತಿನಲ್ಲಿರುವ ಗುಡಿ 30X30 ಅಡಿ ಇರುತ್ತದೆ. ದಾವಾ ಸ್ವತ್ತಿನಲ್ಲಿರುವ ಗುಡಿ ಪಹಣಿಗಳಲ್ಲಿ ಎಲ್ಲಿಯೂ ಕೂಡಾ ಕುರುಬ ಸಮಾಜದ ಗುಡಿ ಎಂದು ಬರೆದಿಲ್ಲ ಎಂದರೆ ಸರಿ.

This is a True Copy of the Court Records Online. Authenticated @ districts.ecourtsindia.com/cnr/KAKB210000902019/truecopy/order-9.pdf

**OS. No.14/2019**
**P.W-6**

ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಇವತ್ತಿನವರೆಗೂ ಸರಕಾರದ ತಾಬಾದಲ್ಲಿ ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಕುರುಬ ಸಮಾಜದ ತಾಬಾದಲ್ಲಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಖಾಸಗಿ ಜಮೀನು ಅಲ್ಲ ಎಂದರೆ ಸರಿ. ದಾವಾ ಸ್ವತ್ತು ಸಾಗುವಳಿ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**

This is a True Copy of the Court Records Online. Authenticated @ districts.ecourtsindia.com/cnr/KAKB210000902019/truecopy/order-9.pdf